ಕ್ರಮ ಸಂಖ್ಯೆ	ದತ್ತು ತೆಗೆದುಕೊಂಡಿರುವ ಸರ್ಕಾರಿ ಶಾಲೆಗಳ ಹೆಸರು ಮತ್ತು ವಿಳಾಸ

(57) ಸ.ಪ್ರಾ. ಶಾಲೆ, ಮುಕುಟಮ್ಮನಗರ;

(58) ಸ.ಪ್ರಾ. ಶಾಲೆ. ಕೃಷ್ಣಪ್ಪ ಗಾರ್ಡನ್;

(59) ಸ.ಕ.ಹಿ.ಪ್ರಾ. ಶಾಲೆ, ಕ್ಲೀವ್‌ಲ್ಯಾಂಡ್ ಟೌನ್;

(60) ಸರ್ಕಾರಿ ಪೌಢ ಶಾಲೆ, ಪಯನೀರ್‌ಚೇರಿ;

(61) ಸ.ಕ.ಹಿ.ಪ್ರಾ. ಶಾಲೆ ಕಿತ್ತನಹಳ್ಳಿ;

(62) ಸರ್ಕಾರಿ ಪ್ರೌಢ ಶಾಲೆ, ಸಾಣೆಗುರುವನ ಹಳ್ಳಿ;

(63) ಸರ್ಕಾರಿ ಪ್ರೌಢ ಶಾಲೆ, ಕೇತುಮಾರನಹಳ್ಳಿ, ರಾಜಾಜಿನಗರ, ಬೆಂಗಳೂರು;

(64) ಸರ್ಕಾರಿ ಪ್ರೌಢ ಶಾಲೆ,13ನೇ ಆಡ್ಡರಸ್ತೆ, ಮಲ್ಲೇಶ್ವರಂ;

(65) ಸ.ಕ.ಹಿ.ಪ್ರಾ. ಶಾಲೆ, ಮತ್ತಿಕೆರೆ;

(66) ಸರ್ಕಾರಿ ತಮಿಳು ಹಿರಿಯ ಪ್ರಾಥಮಿಕ ಶಾಲೆ, ಕ್ಲೀವ್‌ಲ್ಯಾಂಡ್ ಟೌನ್.

ಪಿ.ಯು.ಸಿ. ಉತ್ತರ ಪತ್ರಿಕೆಗಳ ಫೋಟೋ ಪ್ರತಿ ವ್ಯವಸ್ಥೆ

2934 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ನೀಡುವ ಹಾಗೂ ಮರು ಮೌಲ್ಯಮಾಪನ ವ್ಯವಸ್ಥೆಯನ್ನು ರದ್ದು ಗೊಳಿಸಲು ಸರ್ಕಾರ ಆಲೋಚಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡುವ ದೃಷ್ಟಿಯಿಂದ ಈಗಿನ ಪದ್ಧತಿಯನ್ನು ಮುಂದುವರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) -ಇಲ್ಲ-.

ಆ) ಆದರೆ, ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 19721:2000 ರ ಬಗ್ಗೆ ದಿನಾಂಕ: 19-7-2000 ರಂದು ನೀಡಿರುವ ತೀರ್ಪಿನ ಪರಿಣಾಮ ಎಲ್ಲಾ 2ನೇ ಪಿಯುಸಿಯ 42 ವಿಷಯಗಳಲ್ಲಿ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ಹಾಗೂ ಮರುಮೌಲ್ಯಮಾಪನ ಮಾಡ

ಬೇಕಾಗುತ್ತದೆ. ಇದಕ್ಕೆ ಅಗತ್ಯ ಸೌಕರ್ಯ ಇಲ್ಲದೆ ಇರುವುದರಿಂದ ಈ ಬಗ್ಗೆ ಮುಂದೆ ಆಲೋಚಿಸಲಾಗುವುದು. ಈ ವಿಚಾರದಲ್ಲಿ ಸರ್ಕಾರವು ರಾಜ್ಯ ಉಚ್ಚ ನ್ಯಾಯಾಲಯದ ಆದೇಶ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ಎಸ್.ಎಲ್.ಪಿ. ದಾಖಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಕಾಲೇಜು ಪ್ರಾರಂಭ

2935 -ಶ್ರೀ. ರಾಜೇಂದ್ರ ವರ್ಮ (ಹುಲಸೂರ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಲಸೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ ಎಷ್ಟು? (ಗ್ರಾಮಾವಾರು ಅಂಕಿ ಸಂಖ್ಯೆಗಳನ್ನು ಒದಗಿಸುವುದು)*

ಆ) *ಈ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮೆಹಕರ್ ಗ್ರಾಮವು ಮಹಾರಾಷ್ಟ್ರದ ಗಡಿಭಾಗದಲ್ಲಿರುವುದರಿಂದ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣಕ್ಕಾಗಿ ದೂರದ ಬಸವಕಲ್ಯಾಣದ ಹುಮನಾಬಾದ್ ಮತ್ತು ಭಾಲ್ಕಿ ತಾಲ್ಲೂಕುಗಳಿಗೆ ಹೋಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?*

ಇ) *ಹಾಗಿದ್ದಲ್ಲಿ ಸರ್ಕಾರ ಈ ವಿಷಯವನ್ನು ಆದ್ಯತೆಯ ಮೇಲೆ ಪರಿಗಣಿಸಿ ಮೆಹಕರ್ ಹಾಗೂ ಸುತ್ತ ಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮೆಹಕರ್ ಗ್ರಾಮದಲ್ಲಿ ಒಂದು ಸರ್ಕಾರಿ ಕಿರಿಯ ಕಾಲೇಜನ್ನು ಪ್ರಾರಂಭಿಸಲಾಗುವುದೇ?*

ಈ) *ಇಲ್ಲದಿದ್ದಲ್ಲಿ ಮೆಹಕರ್ ಗ್ರಾಮದಲ್ಲಿ ಸರ್ಕಾರಿ ಕಿರಿಯ ಕಾಲೇಜನ್ನು ಪ್ರಾರಂಭಿಸದಿರಲು ಕಾರಣಗಳೇನು?*

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಒಂದು ಸರ್ಕಾರಿ ಪದವಿ ಪೂರ್ವ ಕಾಲೇಜು ದುಬಲಗುಂಡಿ.

ಆ) 20 ಕಿ.ಮೀ.ವ್ಯಾಪ್ತಿಯಲ್ಲಿ ಹುಲಸೂರು ಇಲ್ಲಿ ಒಂದು ಅನುದಾನಿತ ಮತ್ತು ಬಾತಾಂಬ್ರಾದಲ್ಲಿ ಒಂದು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. ಆದರೆ ನಗರದಲ್ಲಿ ಶಿಕ್ಷಣ ಬಯಸುವ ವಿಧ್ಯಾರ್ಥಿಗಳು ಬಸವಕಲ್ಯಾಣ ಮತ್ತು ಭಾಲ್ಕಿಗಳಿಗೆ ಹೋಗುವುದು ನಿಜ.

ಇ) ಮೆಹಕರ್‌ಗೆ ಸಮೀಪವಿರುವ ಬಾತಾಂಬ್ರಾದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 1999-2000ನೇ ಸಾಲಿನಲ್ಲಿ ಪ್ರಥಮ ಪಿಯುಸಿಯಲ್ಲಿ 25 ಮತ್ತು ದ್ವಿತೀಯ ಪಿಯುಸಿ-ಯಲ್ಲಿ 03 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಬಾತಾಂಬಾ ಭಾಲ್ಕಿಗೆ ಸುಮಾರು 8.ಕಿ.ಮೀ. ದೂರದಲ್ಲಿರುವುದರಿಂದ ಸದರಿ ಗ್ರಾಮದ ವಿದ್ಯಾರ್ಥಿಗಳು ಪಿಯುಸಿ ವ್ಯಾಸಂಗಕ್ಕಾಗಿ ಬಾಲ್ಕಿಗೆ ಹೋಗುತ್ತಾರೆ. ಆದಕಾರಣ ಬಾತಾಂಬ್ರಾದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮೆಹಕರ್‌ಗೆ ಸ್ಥಳಾಂತರಿಸಲು ಪರಿಶೀಲಿಸಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.